483

# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 910 |
| 2 | ಸದಸ್ಯರ ಹೆಸರು | : | ಶ್ರೀ ಎಸ್. ರವಿ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 22.02.2024 |
| 4 | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಭಾರತದ 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿವಿಧ ಯೋಜನೆಗಳಡಿ ಬಿಡುಗಡೆ ಆಗಬೇಕಾದ ಅನುದಾನವೆಷ್ಟು ಮತ್ತು 2021 ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಬಿಡುಗಡೆಗೆ ಬಾಕಿ ಇರುವ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು | 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಬರಬೇಕಾದ ಅನುದಾನದ ವಿವರಗಳು (ರಾಜ್ಯಕ್ಕೆ ಕೇಂದ್ರದಿಂದ ಸ್ವೀಕೃತವಾಗುವ ತೆರಿಗೆ ಪಾಲು ಶೇ.3.64 ಹೊರತುಪಡಿಸಿ) : |

**ರೂ.ಕೋಟಿಗಳಲ್ಲಿ**

| **15ನೇ ಹಣಕಾಸು ಆಯೋಗದ ಶಿಫಾರಸ್ಸು** | **ಅನುದಾನದ ಮೊತ್ತ (2020-21 ರಿಂದ 2025-26)** |
|---|---|
| ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ | 15756.00 |
| ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ | 7958.00 |
| ರಾಜ್ಯ ವಿಪತ್ತು ನಿಧಿಗೆ ಕೇಂದ್ರದ ಪಾಲು | 5160.00 |
| ಪ್ರಾಥಮಿಕ ಆರೋಗ್ಯ ಸೌಲಭ್ಯಗಳನ್ನು ಬಲಪಡಿಸಲು 15ನೇ ಹಣಕಾಸು ಆಯೋಗದ ಅನುದಾನ | 2929.00 |
| ಡೆವಲ್ಯೂಷನ್ ನಂತರದ ರಾಜಸ್ವ ಕೊರತೆ ಸರಿದೂಗಿಸಲು ಕೇಂದ್ರದ ಅನುದಾನ | 1631.00 |
| ವಿಶೇಷ ಅನುದಾನ | 5,495.00 |
| ರಾಜ್ಯ ಕೇಂದ್ರಿತ ಅನುದಾನ | 6000.00 |
| ಒಟ್ಟು | **44,929.00** |

2020-21 ರಿಂದ 2023-24 ರ ವರೆಗೆ ಬಿಡುಗಡೆಯಾಗಬೇಕಾದ ಅನುದಾನ ಹಾಗೂ ಬಿಡುಗಡೆಯಾಗಿರುವ ಅನುದಾನ ಮತ್ತು ಬಾಕಿ ಅನುದಾನದ ವಿವರಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

**ಆ)** ಭಾರತದ 14ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶಿಫಾರಸ್ಸು ಮಾಡಿರುವ ಅನುದಾನವೆಷ್ಟು ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು (ವರ್ಷವಾರು ಸಂಪೂರ್ಣ ವಿವರ ನೀಡುವುದು)

14ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶಿಫಾರಸ್ಸು ಮಾಡಿದ ಅನುದಾನ ಹಾಗೂ ಕೇಂದ್ರದಿಂದ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.

**ಇ)** ಭಾರತದ 14ನೇ ಹಣಕಾಸು ಆಯೋಗದ ಅನುದಾನಕ್ಕೆ ಹೋಲಿಸಿದರೆ 15ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದ ರಾಜ್ಯಕ್ಕೆ ಎಷ್ಟು ಮೊತ್ತದ ಅನುದಾನ ಕಡಿತವಾಗಿದೆ; (ಸಂಪೂರ್ಣ ವಿವರ ನೀಡುವುದು)

| ವರ್ಷ | ಕೇಂದ್ರದ ತೆರಿಗೆ ಹಂಚಿಕೆ ಮೊತ್ತ | ರಾಜ್ಯಕ್ಕೆ ಸ್ವೀಕೃತವಾಗಿರುವ ಹಂಚಿಕೆ (15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ) | ರಾಜ್ಯಕ್ಕೆ ಸ್ವೀಕೃತವಗುತ್ತಿದ್ದ ಹಂಚಿಕೆ (14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ) | ಕೊರತೆ |
|---|---|---|---|---|
| 2021-21 | 5,94,997 | 21,694 | 28,024 | 6,330 |
| 2021-22 | 8,98,392 | 33,284 | 42,314 | 9,030 |
| 2022-23 | 9,72,204 | 34,596 | 45,791 | 11,195 |
| 2023-24 | 11,04,494 | 37,252 | 52,022 | 14,770 |
| 2024-25 (ಅಂದಾಜು) | 12,19,783 | 44,485 | 57452 | 12,966 |
| 2025-26 (ಅಂದಾಜು) | 13,46,640 | 49,018 | 63,427 | 14,409 |
| ಒಟ್ಟು | | | | 68,700 |

ಅಲ್ಲದೆ, 15ನೇ ಹಣಕಾಸು ಆಯೋಗವು ತನ್ನ ವರದಿಯಲ್ಲಿ ರಾಜ್ಯಕ್ಕೆ ವಿಶೇಷ ಅನುದಾನ ರೂ.5,495 ಕೋಟಿ ಹಾಗು ರಾಜ್ಯ ಕೇಂದ್ರಿತ ಅನುದಾನ ರೂ.6,000 ಕೋಟಿಗಳನ್ನು ಶಿಫಾರಸ್ಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರವು ಈವರೆಗೂ ಈ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಆದ್ದರಿಂದ ಒಟ್ಟಾರೆಯಾಗಿ 14ನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ ರಾಜ್ಯಕ್ಕೆ ತೆರಿಗೆ ಹಂಚಿಕೆ ಹಾಗು ಅನುದಾನದಿಂದ ಒಟ್ಟು 80,195 ಕೋಟಿ ರೂ.ಗಳು ಕಡಿತವಾಗಿರುತ್ತದೆ.

**ಈ)** 15ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದ ಅನುದಾನ ವಿತರಣೆಯಲ್ಲಿ ರಾಜ್ಯಕ್ಕೆ ಆಗಿರುವ ನಷ್ಟವನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

15ನೇ ಹಣಕಾಸು ಆಯೋಗದ ಮೊದಲ ವರದಿಯಲ್ಲಿ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಆದ ಅನ್ಯಾಯವನ್ನು ಸರಿಪಡಿಸುವಂತೆ ರಾಜ್ಯ ಸರ್ಕಾರವು 15ನೇ ಹಣಕಾಸು ಆಯೋಗಕ್ಕೆ ಹೆಚ್ಚುವರಿ ಜ್ಞಾಪನಾ ಪತ್ರವನ್ನು (Additional Memorandum) ಸಲ್ಲಿಸಿರುತ್ತದೆ. ಅಲ್ಲದೆ, ರಾಜ್ಯ ಸರ್ಕಾರದಿಂದ ಹಲವು ಬಾರಿ ಪತ್ರ ಮುಖೇನ 15ನೇ ಹಣಕಾಸು ಆಯೋಗದ ಅಧ್ಯಕ್ಷರಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಕೇಂದ್ರ ಸರ್ಕಾರ ರಾಜ್ಯದ ಮನವಿಯನ್ನು ಈವರವಿಗೂ ಪುರಸ್ಕರಿಸಿರುವುದಿಲ್ಲ.

15ನೇ ಹಣಕಾಸು ಆಯೋಗದ ಅವಧಿಯು 2025-26 ಕ್ಕೆ ಮುಕ್ತಾಯವಾಗಲಿದ್ದು, ಇದೀಗ ಕೇಂದ್ರ ಸರ್ಕಾರವು 16ನೇ ಹಣಕಾಸು ಆಯೋವನ್ನು ರಚಿಸಿದೆ. 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕಾದ ಅನ್ಯಾಯವನ್ನು ಸರಿಪಡಿಸಲು ರಾಜ್ಯ ಸರ್ಕಾರವು ಕ್ರಮವಹಿಸಿರುತ್ತದೆ. 16ನೇ ಹಣಕಾಸು ಆಯೋಗದ Terms of Reference ಗೆ ರಾಜ್ಯದ ವತಿಯಿಂದ ದಿನಾಂಕ:06.07.2023ರ ಪತ್ರದಲ್ಲಿ ಸಲಹೆಗಳನ್ನು ನೀಡಲಾಗಿದೆ. 15ನೇ ಹಣಕಾಸು ಆಯೋಗದ ಶಿಫಾರಸ್ಸಿನಲ್ಲಿ

| | | | |
|---|---|---|---|
| | | | ರಾಜ್ಯಕ್ಕೆ ತೆರಿಗೆ ಹಂಚಿಕೆ ಆದ ಅನ್ಯಾಯವನ್ನು ಸರಿಪಡಿಸಲು 16ನೇ ಹಣಕಾಸು ಆಯೋಗದ ಮುಂದೆ ರಾಜ್ಯದ ಪರವಾಗಿ ಜ್ಞಾಪನಾ ಪತ್ರವನ್ನು Memorandum ತಯಾರಿಸಲು, ರಾಜ್ಯ ಸರ್ಕಾರವು ಮೂವರು ವಿಷಯ ತಜ್ಞರನ್ನು ನೇಮಕ ಮಾಡಿದೆ. ಈ ಜ್ಞಾಪನಾ ಪತ್ರದ ಮೂಲಕ ಹೆಚ್ಚಿನ ತೆರಿಗೆ ಪಾಲು ಮತ್ತು ಅನುದಾನಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಕೋರಿಕೆಗಳನ್ನು 16ನೇ ಹಣಕಾಸು ಆಯೋಗಕ್ಕೆ ಸಲ್ಲಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಆಇ 06 ಆಆಕೋ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ 1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರತಿಲ್ಲದ ಪ್ರಶ್ನೆ ಸಂಖ್ಯೆ:910.**

**2020-21 ರಿಂದ 2023-24 ರ ವರೆಗೆ ಬಿಡುಗಡೆಯಾಗಬೇಕಾದ ಅನುದಾನ ಹಾಗೂ ಬಿಡುಗಡೆಯಾಗಿರುವ ಅನುದಾನ ಮತ್ತು ಬಾಕಿ ಅನುದಾನದ ವಿವರಗಳು.**

| (2020-21 ರಿಂದ 2023-24ರ ವರೆಗೆ) | | | |
|---|---|---|---|
| ವಿವರಗಳು | ಬಿಡುಗಡೆ ಮಾಡಬೇಕಾದ ಅನುದಾನ ಮೊತ್ತ | ಬಿಡುಗಡೆಯಾದ ಅನುದಾನ ಮೊತ್ತ | ಬಾಕಿ |
| ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ | 10147.00 | 8109.00 | 2038.00 |
| ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ | 4657.00 | 3346.00 | 1311.00 |
| ರಾಜ್ಯ ವಿಪತ್ತು ನಿಧಿಗೆ ಕೇಂದ್ರದ ಪಾಲು | 3284.00 | 2944.00 | 340.00 |
| ಪ್ರಾಥಮಿಕ ಆರೋಗ್ಯ ಸೌಲಭ್ಯಗಳನ್ನು ಬಲಪಡಿಸಲು 15ನೇ ಹಣಕಾಸು ಆಯೋಗದ ಅನುದಾನ | 1683.00 | 741.00 | 942.00 |
| ಡೆವಲ್ಯೂಷನ್ ನಂತರದ ರಾಜಸ್ವ ಕೊರತೆ ಸರಿದೂಗಿಸಲು ಕೇಂದ್ರದ ಅನುದಾನ | 1631.00 | 1631.00 | 0.00 |
| ವಿಶೇಷ ಅನುದಾನ | 5,495.00 | 0.00 | 5,495.00 |
| ರಾಜ್ಯ ಕೇಂದ್ರಿತ ಅನುದಾನ | 6,000.00 | 0.00 | 6,000.00 |
| **ಒಟ್ಟು** | **32,897.00** | **16771.00** | **16,126.00** |

ಅನುಬಂಧ 2

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರತಿಲ್ಲದ ಪ್ರಶ್ನೆ ಸಂಖ್ಯೆ:910.

14ನೇ ಹಣಕಾಸು ಆಯೋಗವು ರಾಜ್ಯಕ್ಕೆ ಶಿಫಾರಸ್ಸು ಮಾಡಿದ ಅನುದಾನ ಹಾಗೂ ಕೇಂದ್ರದಿಂದ ಬಿಡುಗಡೆಯಾದ ಅನುದಾನದ ವರ್ಷವಾರು ವಿವರಗಳು.

ಅ) ನಗರಾಭಿವೃದ್ಧಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಷ | ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಮಾನ್ಯ ಮೂಲ ಅನುದಾನ | | | ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಮಾನ್ಯ ಮೂಲ ಅನುದಾನ | | |
|---|---|---|---|---|---|---|
| | 14ನೇ ಹಣಕಾಸು ಆಯೋಗದ ಶಿಫಾರಸ್ಸು | ಬಿಡುಗಡೆಯಾದ ಅನುದಾನ | ಕೊರತೆ | 14ನೇ ಹಣಕಾಸು ಆಯೋಗದ ಶಿಫಾರಸ್ಸು | ಬಿಡುಗಡೆಯಾದ ಅನುದಾನ | ಕೊರತೆ |
| 2015-16 | 562.08 | 562.08 | - | - | - | - |
| 2016-17 | 778.29 | 778.29 | - | 229.70 | 229.70 | - |
| 2017-18 | 899.25 | 899.25 | - | 259.94 | 256.16 | 3.78 |
| 2018-19 | 1,040.27 | 1,040.27 | - | 295.20 | - | 295.20 |
| 2019-20 | 1,405.62 | 1,405.62 | - | 386.54 | - | 386.54 |
| ಒಟ್ಟು | **4,685.51** | **4,685.51** | | **1,171.38** | **485.86** | **685.52** |

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಷ | ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಮಾನ್ಯ ಮೂಲ ಅನುದಾನ | | | ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಾಮಾನ್ಯ ಕಾರ್ಯಕ್ಷಮತೆ ಅನುದಾನ | | |
|---|---|---|---|---|---|---|
| | 14ನೇ ಹಣಕಾಸು ಆಯೋಗದ ಶಿಫಾರಸ್ಸು | ಬಿಡುಗಡೆಯಾದ ಅನುದಾನ | ಕೊರತೆ | 14ನೇ ಹಣಕಾಸು ಆಯೋಗದ ಶಿಫಾರಸ್ಸು | ಬಿಡುಗಡೆಯಾದ ಅನುದಾನ | ಕೊರತೆ |
| 2015-16 | 1002.85 | 972.36 | 30.49 | - | - | - |
| 2016-17 | 1388.62 | 1368.21 | 20.41 | 182.15 | 179.46 | 2.69 |
| 2017-18 | 1604.42 | 1580.18 | 24.24 | 206.13 | 204.08 | 2.05 |
| 2018-19 | 1856.02 | 1841.54 | 14.48 | 234.08 | - | 234.08 |
| 2019-20 | 2507.88 | 2504.13 | 3.75 | 306.51 | - | 306.51 |
| ಒಟ್ಟು | **8,359.79** | **8,266.42** | **93.37** | **928.87** | **383.54** | **545.33** |

ಇ) ಕಂದಾಯ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಷ | ರಾಜ್ಯ ವಿಪತ್ತು ಉಪಶಮನ ನಿಧಿಗೆ ಕೇಂದ್ರದ ಪಾಲು | | |
|---|---|---|---|
| | 14ನೇ ಹಣಕಾಸು ಆಯೋಗದ ಶಿಫಾರಸ್ಸು | ಬಿಡುಗಡೆ | ಕೊರತೆ |
| 2015-16 | 207.00 | 207.00 | - |
| 2016-17 | 217.50 | 217.50 | - |
| 2017-18 | 228.75 | 228.75 | - |
| 2018-19 | 240.00 | 288.00 | -48.00 |
| 2019-20 | 252.00 | 204.00 | 48.00 |
| ಒಟ್ಟು | **1,145.25** | **1,145.25** | - |